# ಯುನೆಸ್ಕೋದಲ್ಲಿ ಅಮೃತಾ ವಿವಿಗೆ ಗೌರವ

ಬೆಂಗಳೂರು, ನ.8 – ಯುನೆಸ್ಕೋದ ಪ್ರತಿಷ್ಠಿತ ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣದ ಅಧ್ಯಕ್ಷ ಸ್ಥಾನಕ್ಕೆ ಅಮೃತಾ ವಿಶ್ವವಿದ್ಯಾಲಯವನ್ನು ವಿಶ್ವಸಂಸ್ಥೆ ಆಯ್ಕೆ ಮಾಡಿದೆ. ಪ್ಯಾರೀಸ್‌ನಲ್ಲಿ 8,000 ಕ್ಕೂ ಅಧಿಕ ಜನರು ಪಾಲ್ಗೊಂಡಿದ್ದ ಸಮಾವೇಶದಲ್ಲಿ ಅಮೃತಾ ವಿಶ್ವವಿದ್ಯಾಲಯದ ಕುಲಪತಿ ಶ್ರೀ ಮಾತಾ ಅಮೃತಾನಂದಮಯಿ ದೇವಿ ಅವರು ಈ ಪ್ರತಿಷ್ಠಿತ ಸ್ಥಾನವನ್ನು ಅಲಂಕರಿಸಿ ಮಹಿಳಾ ಸಬಲೀಕರಣದ ಸಂದೇಶ ನೀಡಿದರು. ಯುನೆಸ್ಕೋದಲ್ಲಿ ಭಾರತೀಯ ಶಾಶ್ವತ ಪ್ರತಿನಿಧಿ ಮತ್ತು ರಾಯಭಾರಿಯಾಗಿರುವ ರುಚಿರ ಕಂಬೋಜ್, ಯುನೆಸ್ಕೋದ ಉನ್ನತ ಶಿಕ್ಷಣ ವಿಭಾಗದ ಮುಖ್ಯಸ್ಥರಾದ ಡಾ.ಪೀಟರ್ ವೆಲ್ಸ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಅಮೃತಾ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಪಿ.ವೆಂಕಟ್ ರಂಗನ್ ಅವರು ವಿವಿಯ ಪರವಾಗಿ ಒಪ್ಪಂದಕ್ಕೆ ಸಹಿ ಹಾಕಿ ಒಪ್ಪಂದ ಪತ್ರವನ್ನು ಡಾ.ವೆಲ್ಸ್ ಅವರಿಗೆ ಹಸ್ತಾಂತರಿಸಿದರು.